ASHOK LEYLAND
ಅಕ್ಷರಾ ಮೋಟಾರ್ಸ್ - ಕಾವೇರಿ ಮೋಟರ್ಸ್‌ನ ಘಟಕ
ಸಂಪರ್ಕಿಸಿ : +91 9900025519

ಆಂದೋಲನ
ದಿನಪತ್ರಿಕೆ
ಸಂಪಾದಕ : ರಾಜಶೇಖರ ಕೋಟಿ

ಮೈಸೂರು ನಂದಿನಿ ಫ್ಯಾಮಿಲಿ ರೆಸ್ಟೋರೆಂಟ್
mysore nandhini Heritage
Family Restaurant Veg & Non Veg
Andhra Style Irwin Road, Near KSRTC Bus Stand Mysuru - 01
Tandoori Chinese Sea Food
Ph: 0821 - 4191009, 2430241
90082 85555
FREE HOME DELIVERY
Parking Available

ಬಸವಕಲ್ಯಾಣದ ತ್ರಿಪುರಾಂತರ ಕೆರೆ ದಂಡೆಯಲ್ಲಿ ೨೫ ಎಕರೆಯಲ್ಲಿ ೬ ಅಂತಸ್ತುಗಳ ೧೮೨ ಅಡಿ ಎತ್ತರದ ವೃತ್ತಾಕಾರದ ಅನುಭವ ಮಂಟಪವನ್ನು ೬೦೦ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.



೬೦೦ ಕೋಟಿ ರೂ. ವೆಚ್ಚದಲ್ಲಿ ಅನುಭವ ಮಂಟಪ

ಪ್ರತಿಭಾ ಕಾರಂಜಿಗೆ ಬಾಲಕಿಯ ವೇಷ-ಆಟ

ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಸೋಮವಾರ ಆಯೋಜಿಸಿದ್ದ ವಲಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಬಾಲೆಯೊಬ್ಬಳ ಕೋಲಾಟ ಪ್ರದರ್ಶನದ ಪರಿ.

ಗರಿಷ್ಠ: ೨೭° । ಕನಿಷ್ಠ: ೧೭°
ಮೋಡಕವಿದ ವಾತಾವರಣ ಸಾಧಾರಣ ಮಳೆ ಸಂಭವ

ಸಂಪುಟ: ೪೬ ಸಂಚಿಕೆ: ೨೪೫, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೨೧ ● ಸಪ್ತಮಿ– ಕೃತಿಕಾ, ಮಂಗಳವಾರ, ಸೆ.೧೨, ೨೦೧೭, ದೂರವಾಣಿ: ೨೪೪೪೫೦೧, ೨೪೪೪೫೦೪, ೨೪೪೪೫೦೫, ಫ್ಯಾಕ್ಸ್: ೨೪೪೪೫೦೩, ಪುಟ: ೧೨, ರೂ. ೩

ಆಚರಣೆ ಸಂಸ್ಕೃತಿ ಮೀರದಿರಲಿ

ಸ್ವಾಮಿ ವಿವೇಕಾನಂದರ ಚಿಕಾಗೊ ಭಾಷಣ, ದೀನ್‌ದಯಾಳ್ ಜನ್ಮಶತಾಬ್ಧಿ ನೆನಪಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತು

ಪ್ರಧಾನಿ ಮೋದಿ ಅವರು ಹೊಸದಿಲ್ಲಿಯಲ್ಲಿ ಮಾಡಿದ ಭಾಷಣದ ನೇರ ಪ್ರಸಾರವನ್ನು ಮೈಸೂರು ವಿವಿ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಮಾನಸ ಗಂಗೋತ್ರಿಯ ಸೆನೆಟ್ ಭವನದ ಸಭಾಂಗಣದಲ್ಲಿ ಸೋಮವಾರ ವೀಕ್ಷಿಸಿದರು.

ಹೊಸದಿಲ್ಲಿ,ಸೆ.೧೧– ನಮ್ಮಗಳ ಪದ್ಧತಿ, ಆಚರಣೆಗಳು ಭಿನ್ನವಾಗಿರಬಹುದು. ಯಾವುದೇ ಆಚರಣೆಗಳಿಗೆ ನಮ್ಮ ವಿರೋಧವಿಲ್ಲ. ಆದರೆ ಈ ಯಾವ ಆಚರಣೆಗಳೂ ನಮ್ಮ ಸಂಸ್ಕೃತಿಯನ್ನು ಮೀರಿ ನಡೆಯಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಅಮೆರಿಕದ ಚಿಕಾಗೋದಲ್ಲಿ ಸರ್ವಧರ್ಮ ಸಮ್ಮೇಳನವನ್ನುದ್ದೇಶಿಸಿ ಸ್ವಾಮಿ ವಿವೇಕಾನಂದ ಅವರು ಮಾಡಿದ ಭಾಷಣದ ೧೨೫ನೇ ವರ್ಷಾಚರಣೆ ಹಾಗೂ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮ ಹಿನ್ನೆಲೆಯಲ್ಲಿ ದಿಲ್ಲಿಯಲ್ಲಿ ಸೋಮವಾರ ಆಯೋಜಿಸಿದ್ದ 'ಯಂಗ್ ಇಂಡಿಯಾ, ನ್ಯೂ ಇಂಡಿಯಾ' ಸಮಾವೇಶದಲ್ಲಿ ದೇಶದ ಯುವ ಸಮುದಾಯವನ್ನು ಉದ್ದೇಶಿಸಿ ಅವರು ಮಾತನಾಡಿದರು.

> ಪ್ರಧಾನಿ ಭಾಷಣದ ನೇರ ಪ್ರಸಾರವನ್ನು ಒಂದಷ್ಟು ವಿದ್ಯಾರ್ಥಿಗಳಾದರೂ ವೀಕ್ಷಿಸಲಿ ಎಂಬ ಸದುದ್ದೇಶದಿಂದಷ್ಟೇ 'ಕಡ್ಡಾಯ' ಪದ ಬಳಕೆ ಮಾಡಲಾಗಿದೆ. ಹಾಗೆಂದು ಗೈರು ಹಾಜರಾದವರ ವಿರುದ್ಧ ಕ್ರಮ ಕೈಗೊಳ್ಳುವುದೇನೂ ಇಲ್ಲ.
>
> –ಡಿ.ಭಾರತಿ,
> ಮೈವಿವಿ ಕುಲಸಚಿವೆ

ಕಾಲೇಜುಗಳಲ್ಲಿ 'ರೋಸ್ ಡೇ' ಆಚರಿಸಲು ನಮ್ಮದೇನೂ ವಿರೋಧವಿಲ್ಲ. ಕೇರಳದಲ್ಲಿ ರೋಸ್ ಡೇ, ಪಂಜಾಬ್‌ನಲ್ಲಿ ಸಿಖ್ ಡೇ ಏನು ಬೇಕಾದರೂ ಆಚರಿಸಿಕೊಳ್ಳಲಿ. ಆದರೆ ಯಾವುದೇ ಆಚರಣೆ ನಮ್ಮ ಸಂಸ್ಕೃತಿಯ ಎಲ್ಲೆಯನ್ನು ಮೀರಿ ನಡೆಯಬಾರದು ಎನ್ನುವ ಎಚ್ಚರಿಕೆ ಸಂದೇಶವನ್ನೂ ಪ್ರಧಾನಿ ನರೇಂದ್ರ ಮೋದಿ ನೀಡಿದರು.

ದೇಶದ ಸ್ವಚ್ಛತೆ ಬಗ್ಗೆ ಕಾಳಜಿ ವಹಿಸುವವರೇ ನಿಜವಾದ ಸಂತರು. ಅವರು ಭಾರತ ಮಾತೆಯ ವರಪುತ್ರರು. ದೇಶದ ಎಲ್ಲಾ ಜನರು ಸ್ವಚ್ಛತೆ ಕಾಪಾಡುವ ಕಡೆಗೆ ಆದ್ಯತೆ ನೀಡಬೇಕು. ಸ್ವಾಮಿ ವಿವೇಕಾನಂದ ಅವರು ಬದುಕಿದ್ದರೆ ಗಂಗಾನದಿ ಮಲಿನಗೊಳ್ಳಲು ಬಿಡುತ್ತಿರಲಿಲ್ಲ ಎಂದು ಹೇಳಿದ ಪ್ರಧಾನಿ, ನಿತ್ಯಜೀವನದಲ್ಲಿ ಸ್ವಚ್ಛತಾ ಕೆಲಸ ಮಾಡುವ ಕಾರ್ಮಿಕರ ಶ್ರಮದ ಬಗ್ಗೆ ಗುಣಗಾನ ಮಾಡಿದರು.

ಮೊದಲು ಶೌಚಾಲಯ: 'ಮೊದಲು ಶೌಚಾಲಯ ನಿರ್ಮಿಸಬೇಕು. ಆನಂತರವೇ ದೇವಾಲಯ' ಎನ್ನುವ ತಮ್ಮ ಹೇಳಿಕೆ ಭಾರೀ ವಿವಾದವನ್ನೇ ಸೃಷ್ಟಿ ಮಾಡಿತ್ತು. ಆದರೆ, ಹೆಣ್ಣುಮಕ್ಕಳು ಆತ್ಮಗೌರವದಿಂದ ಬದುಕಬೇಕಾದರೆ ಶೌಚಾಲಯ ಅಗತ್ಯ. ಏನನ್ನು ತಿನ್ನುತ್ತೇವೆ, ಬಿಡುತ್ತೇವೆ ಎನ್ನುವುದಕ್ಕಿಂತ ಆತ್ಮಗೌರವ ಮುಖ್ಯ. ಈ ನಿಟ್ಟಿನಲ್ಲಿ ನಮ್ಮ ವಿಚಾರಧಾರೆಗಳು ಬದಲಾಗುವ ಅಗತ್ಯವಿದೆ ಎಂದರು.

⏭ ೧೧

ಏನನ್ನು ಕೇಳಬೇಕು, ಏನನ್ನು ತಿನ್ನಬೇಕೆಂದು ಗೊತ್ತಿದೆ...

ಇದು ಯಾವ ರೀತಿ ಅಜೆಂಡಾ ಎಂದು ಅರ್ಥವಾಗುತ್ತಿಲ್ಲ. ನಾವು ಇಲ್ಲಿ ವ್ಯಾಸಂಗಕ್ಕೆ ಬಂದಿರುವುದು. ಏನನ್ನು ಕೇಳಬೇಕು, ಕೇಳಬಾರದು ಎಂಬುದರ ಅರಿವು ನಮಗಿದೆ. ಮೋದಿ ಅವರ ಭಾಷಣ ಕೇಳಲೇಬೇಕು ಎಂದು ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರಿ, ಅವರ ಮನಸ್ಸನ್ನು ಕುಗ್ಗಿಸುವ ಪ್ರಯತ್ನ ಇದಾಗಿದೆ. ಆದರೆ, ನಾವು ಇದನ್ನು ಕಡ್ಡಾಯವಾಗಿ ವಿರೋಧಿಸುತ್ತೇವೆ.

–ಪ್ರತಿಭಟನಾನಿರತ ವಿದ್ಯಾರ್ಥಿ

ಭಾಷಣ ವೀಕ್ಷಣೆ ಕಡ್ಡಾಯಕ್ಕೆ ಆಕ್ರೋಶ

ಮೈಸೂರು: ಪ್ರಧಾನಿ ನರೇಂದ್ರ ಮೋದಿ ಭಾಷಣದ ನೇರ ಪ್ರಸಾರವನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ವೀಕ್ಷಿಸಲೇಬೇಕು ಎಂದು ಯುಜಿಸಿ ಹಾಗೂ ಮೈಸೂರು ವಿವಿ ಮೂಲಕ ಸುತ್ತೋಲೆ ಹೊರಡಿಸಿರುವುದು ಹಿಂದುತ್ವವನ್ನು ಹೇರುವ ಹುನ್ನಾರವಾಗಿದೆ ಎಂದು ನಗರದ ಕೆಲ ಪ್ರಗತಿಪರರು ಮತ್ತು ವಿದ್ಯಾರ್ಥಿಗಳು ಟೀಕಿಸಿದ್ದಾರೆ.

ಪ್ರಧಾನಿ ಮೋದಿ ಭಾಷಣವನ್ನು ಕಡ್ಡಾಯವಾಗಿ ವೀಕ್ಷಿಸಲು ಮಾನಸ ಗಂಗೋತ್ರಿಯ ಸೆನೆಟ್ ಹಾಲ್‌ಗೆ ಬರುವಂತೆ ಮೈಸೂರು ವಿವಿ ಸುತ್ತೋಲೆ ಹೊರಡಿಸಿರುವುದನ್ನು ವಿಶ್ವವಿದ್ಯಾಲಯದ ಕೆಲವು ವಿದ್ಯಾರ್ಥಿಗಳು ಖಂಡಿಸಿದ್ದಾರೆ. ಸಮಾಜವಾದಿ ಚಿಂತಕ ಪ.ಮಲ್ಲೇಶ್ ನೇತೃತ್ವದಲ್ಲಿ ಸೆನೆಟ್ ಹಾಲ್ ಮುಂಭಾಗ ಸೋಮವಾರ ಪ್ರತಿಭಟನೆಯನ್ನೂ ನಡೆಸಿದರು. ಕೇಂದ್ರ ಸರ್ಕಾರ ಹಾಗೂ ವಿವಿ ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಸ್ವಾಮಿ ವಿವೇಕಾನಂದ, ದೀನ್‌ದಯಾಳ್ ಅವರ ಮಾತುಗಳನ್ನು ನಾವುಗಳು ಈಗಾಗಲೇ ಓದಿ ತಿಳಿದಿದ್ದೇವೆ. ಅದನ್ನು ಮತ್ತೊಮ್ಮೆ ಮೋದಿ ಅವರಿಂದ ಕೇಳಿ ತಿಳಿಯುವ ಅಗತ್ಯವೂ ಇಲ್ಲ. ವಿದ್ಯಾರ್ಥಿಗಳಿಗೆ ಯಾವುದೇ ವಿಚಾರದಲ್ಲಿಯೂ ಒತ್ತಾಯಪೂರ್ವಕ ಹೇರಿಕೆ ಖಂಡನೀಯ. ಕೇಂದ್ರ ಸರ್ಕಾರ ಇಂತಹ ಕಾರ್ಯಕ್ರಮಗಳಲ್ಲಿಯೂ ರಾಜಕೀಯ ಬೆರೆಸಬಾರದು ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

⏭ ೧೧

ಪ್ರಧಾನಿ ಮೋದಿ ಭಾಷಣದ ನೇರ ಪ್ರಸಾರ ವೀಕ್ಷಣೆ ಕಡ್ಡಾಯಗೊಳಿಸಿದ್ದನ್ನು ಖಂಡಿಸಿ ಮೈಸೂರು ವಿವಿ ವಿದ್ಯಾರ್ಥಿಗಳು, ಚಿಂತಕರು ಮಾನಸಗಂಗೋತ್ರಿಯಲ್ಲಿ ಪ್ರತಿಭಟನೆ ನಡೆಸಿದರು.

ವಿದ್ಯಾರ್ಥಿಗಳ ಬ್ರೈನ್‌ವಾಷ್ ಸಂಚು

ನರೇಂದ್ರ ಮೋದಿ ಭಾಷಣವನ್ನು ಕಡ್ಡಾಯವಾಗಿ ಕೇಳಬೇಕು ಎನ್ನುವುದು ಹಿಂದುತ್ವ ಹೇರಿಕೆಯ ಹುನ್ನಾರ. ತಮ್ಮ ಭಾಷಣದ ಮೂಲಕ ವಿದ್ಯಾರ್ಥಿಗಳ ಮೇಲೆ ಒತ್ತಡ ಹಾಕಿ ಅವರ ಬ್ರೈನ್‌ವಾಷ್ ಮಾಡುವ ಸಂಚು ಇದು. ವಿದ್ಯಾರ್ಥಿಗಳೇನು ಕುರಿಗಳಲ್ಲ, ಅವರಿಗೂ ಸ್ವಂತ ವಿವೇಚನೆ ಇದೆ. ಭಾರತದ ಇತಿಹಾಸದಲ್ಲಿ ಯಾವುದೇ ಪ್ರಧಾನಿ ಹೀಗೆ ತಮ್ಮ ಭಾಷಣವನ್ನು ಕಡ್ಡಾಯವಾಗಿ ಕೇಳುವಂತೆ ಕಡ್ಡಾಯ ಹೇರಿದ್ದನ್ನು ಈವರೆಗೆ ನಾನಂತೂ ನೋಡಿಲ್ಲ.

–ಪ.ಮಲ್ಲೇಶ್, ಪ್ರಗತಿಪರ ಚಿಂತಕರು

ಗೌರಿ ಲಂಕೇಶ್ ಹತ್ಯೆ ಪ್ರಕರಣ: ರಹಸ್ಯ ಸ್ಥಳದಲ್ಲಿ ಆರೋಪಿ ವಿಚಾರಣೆ

ಆಂಧ್ರದಲ್ಲಿ ಎಸ್‌ಐಟಿ ವಶಕ್ಕೆ ಶಂಕಿತ ವ್ಯಕ್ತಿ

ಬೆಂಗಳೂರು,ಸೆ.೧೧– ಗೌರಿ ಲಂಕೇಶ್ ಹತ್ಯೆಗೆ ಸುಪಾರಿ ನೀಡಲಾಗಿತ್ತೇ? ಸುಪಾರಿ ಪಡೆದ ಹಂತಕ ಆಂಧ್ರಪ್ರದೇಶದಲ್ಲಿ ಸಿಕ್ಕಿಬಿದ್ದಿದ್ದಾನೆಯೇ? ಆತನಿಂದ ಕೊಲೆಯ ರಹಸ್ಯ ಬಯಲಾಗುವುದೇ? ಈ ಪ್ರಶ್ನೆಗಳಿಗೆ 'ಹೌದು' ಎನ್ನುತ್ತಿವೆ ಪೊಲೀಸ್ ಮೂಲಗಳು.

ಗೌರಿ ಲಂಕೇಶ್ ಹತ್ಯೆ ಪ್ರಕರಣದ ತನಿಖೆಗೆಂದೇ ರಚನೆಯಾಗಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ) ಶಂಕಿತ ಆರೋಪಿಯನ್ನು ವಶಕ್ಕೆ ಪಡೆದಿದ್ದು, ರಹಸ್ಯ ಸ್ಥಳದಲ್ಲಿ ವಿಚಾರಣೆಗೊಳಪಡಿಸಿದೆ. ಸುಪಾರಿ ನೀಡಿದವರಾರು? ಏಕೆ ಎಂಬ ಮಾಹಿತಿ ಪಡೆಯುತ್ತಿದೆ ಎಂದು ತಿಳಿದುಬಂದಿದೆ. ಗಾಂಧಿ ಬಜಾರ್‌ನಲ್ಲಿರುವ ಲಂಕೇಶ್ ಪತ್ರಿಕಾ ಕಚೇರಿಯಿಂದ ಗೌರಿ ಲಂಕೇಶ್ ನಿವಾಸದವರೆಗಿನ ಮಾರ್ಗದ ಸಿಸಿ ಕ್ಯಾಮೆರಾಗಳಲ್ಲಿ ದಾಖಲಾದ ದೃಶ್ಯಗಳು, ಮೊಬೈಲ್ ಟವರ್ ಲೊಕೇಶನ್ ಆಧರಿಸಿ ನಡೆಸಿದ ತನಿಖೆ ವೇಳೆ ಆಗಂತುಕನ ಅಸ್ಪಷ್ಟ ಮಾಹಿತಿ ದೊರೆತಿದೆ.

⏭ ೧೧

- ಮೊಬೈಲ್ ಫೋನ್ ಟವರ್ ಲೊಕೇಶನ್ ಆಧರಿಸಿ ಹಂತಕನ ಹೆಜ್ಜೆ ಗುರುತು ಪತ್ತೆ ಹಚ್ಚಿದ ಎಸ್‌ಐಟಿ
- ಗೌರಿ ಲಂಕೇಶ್ ಮನೆ ಬಳಿಯ ಟವರ್‌ನಲ್ಲಿ ದಾಖಲಾಗಿದ್ದ ಮೊಬೈಲ್ ಫೋನ್ ಆಂಧ್ರದಲ್ಲಿ ಪತ್ತೆ

ಇಂದಿನಿಂದ ದಸರಾ ಯುವ ಸಂಭ್ರಮ

ಮೈಸೂರು,ಸೆ.೧೧– ನಾಡಹಬ್ಬ ದಸರಾ ಪ್ರಯುಕ್ತ ಇದೇ ೧೨ರಿಂದ ೧೮ರವರೆಗೆ ಯುವ ಸಂಭ್ರಮ, ೨೨ರಿಂದ ಯುವ ದಸರಾ, ಮಕ್ಕಳ ದಸರಾ, ಮಹಿಳಾ ದಸರಾ ಹಾಗೂ ಸಾಂಸ್ಕೃತಿಕ ವೈಭವಕ್ಕೆ ಚಾಲನೆ ದೊರೆಯಲಿದೆ. ಇದರೊಂದಿಗೆ ಈ ಬಾರಿ ಯುವ ಅನ್ವೇಷಣೆಯಂತಹ ವಿನೂತನ ಕಾರ್ಯಕ್ರಮವೂ ಸೇರ್ಪಡೆಯಾಗಿದೆ.

ಈ ಕುರಿತು ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಮಧ್ಯಾಹ್ನ ನಡೆದ ದಸರಾ ವಿವಿಧ ಉಪ ಸಮಿತಿಗಳ ಜಂಟಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಡಿ.ರಂದೀಪ್ ಅವರು ಮಕ್ಕಳ ದಸರಾದ ಪೋಸ್ಟರ್ ಮತ್ತು ಯುವ ಸಂಭ್ರಮದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿದರು.

ನಂತರ ಮಾತನಾಡಿ, ಸಾಧ್ಯವಾದಷ್ಟೂ ಪ್ರಾಯೋಜಕರ ಸಹಭಾಗಿತ್ವದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ ಎಂದರು.

ಯುವ ಸಂಭ್ರಮ ಉಪ ಸಮಿತಿ ಉಪ ವಿಶೇಷಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ.ಚೆನ್ನಣ್ಣನವರ್ ಮಾತನಾಡಿ, ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಸೆ.೧೨ರ ಸಂಜೆ ೬ ಗಂಟೆಗೆ ಯುವ ಸಂಭ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಚಾಲನೆ ನೀಡಲಿದ್ದಾರೆ. ಶಾಸಕ ವಾಸು ಅಧ್ಯಕ್ಷತೆ ವಹಿಸಲಿದ್ದಾರೆ.

⏭ ೧೧

- ನಟಿ ಕಾರುಣ್ಯ ರಾಮ್ ತಾರಾ ಮೆರುಗು
- ೨೨ರಿಂದ ಯುವ, ಮಕ್ಕಳ, ಮಹಿಳಾ ದಸರಾ, ಸಾಂಸ್ಕೃತಿಕ ವೈಭವ
- ಯುವ ದಸರಾದಲ್ಲಿ ಫಲಾಕ್ ಮುಚ್ಚಲ್, ಶಿವಣ್ಣ, ದರ್ಶನ್

ನಕಲಿ ಆಧಾರ್ ಕಾರ್ಡ್ ಜಾಲ ಪತ್ತೆ ⏭ ೩

ಭ್ರೂಣ ಹತ್ಯೆ ನಡೆದರೆ ೧೦೪ಕ್ಕೆ ಕರೆಮಾಡಿ ⏭ ೯

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 393
ದೂರವಾಣಿ: 2425156

Tuesday12 Septembar 2017
ಆಂದೋಲನ
ಸುದ್ದಿಗಾಗಿ
andolana@gmail.com


22 ಕ್ಯಾರೆಟ್ ಚಿನ್ನದ ದರ
ತೊಳಸಿ
₹2810 1 ಗ್ರಾಂಗೆ
ಹಿಂದಿನ ದಿನದ ದರ
THOLASI JEWELS
ಅಶೋಕ ರೋಡ್, ಮೈಸೂರು
Ph: 2521926, 2441926

ಮುಂದಿನ ೩ ವರ್ಷದಲ್ಲಿ ಅರ್ಹ ವಿಶೇಷಚೇತನರಿಗೆ ಉಚಿತ ವಾಹನ

ವಿಶೇಷಚೇತನರಿಗೆ ಹೆಚ್ಚುವರಿ ಚಕ್ರಗಳಿರುವ ಸ್ಕೂಟರ್ ವಿತರಿಸಿದ ಸಿಎಂ

ಬೆಂಗಳೂರು,ಸೆ.೧೧– ಮುಂದಿನ ೩ ವರ್ಷಗಳಲ್ಲಿ ರಾಜ್ಯದ ಎಲ್ಲ ಅರ್ಹ ವಿಶೇಷಚೇತನರಿಗೆ ಹೆಚ್ಚುವರಿ ಚಕ್ರಗಳನ್ನು ಅಳವಡಿಸಿದ ದ್ವಿಚಕ್ರ ವಾಹನ ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಪ್ರಕಟಿಸಿದರು.

ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಕೊಡಲಾದ ಹೆಚ್ಚುವರಿ ಚಕ್ರಗಳನ್ನು ಅಳವಡಿಸಿದ ಸ್ಕೂಟರ್‌ಗಳನ್ನು ವಿಧಾನಸೌಧದ ಪೂರ್ವ ಭಾಗದ ಮೆಟ್ಟಿಲುಗಳ ಬಳಿ ಸೋಮವಾರ ಸಾಂಕೇತಿಕವಾಗಿ ೧೦೪ ಜನರಿಗೆ ವಿತರಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿರುವ ವಿಶೇಷಚೇತನರ ಜನಸಂಖ್ಯೆ ಬಗ್ಗೆ ನಿರ್ದಿಷ್ಟವಾದ ಅಂಕಿ ಅಂಶ ಇಲ್ಲ. ಹೀಗಾಗಿ ಸಮೀಕ್ಷೆ ನಡೆಸಿ ಶೇ.೭೦ರಷ್ಟು ಅಂಗವೈಕಲ್ಯವುಳ್ಳ ವಿಶೇಷಚೇತನರನ್ನು ಗುರುತಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇಲಾಖೆ ಗುರುತಿಸುವ ಎಲ್ಲ ವಿಶೇಷಚೇತನರಿಗೂ ಹೆಚ್ಚುವರಿ ಚಕ್ರ ಅಳವಡಿಸಿದ ದ್ವಿಚಕ್ರವಾಹನಗಳನ್ನು ವಿತರಿಸಲಾಗುವುದು ಎಂದು ಮುಖ್ಯಮಂತ್ರಿಗಳ ಹೇಳಿದರು.

ಕಳೆದ ೨ ವರ್ಷಗಳಿಂದ ವಿಶೇಷಚೇತನರಿಗೆ ದ್ವಿಚಕ್ರ ವಾಹನಗಳನ್ನು ವಿತರಿಸಲಾಗಿಲ್ಲ. ಒಂದು ವರ್ಷ ಟೆಂಡರ್‌ನಲ್ಲಿ ತಾಂತ್ರಿಕ ಸಮಸ್ಯೆಗಳಾದವು. ಮತ್ತೊಂದು ವರ್ಷ ಕೇಂದ್ರ ಸರ್ಕಾರ ವಾಹನದ ಮಾದರಿಯನ್ನೇ ಬದಲಾಯಿಸಿತು. ಹೀಗಾಗಿ ವಾಹನಗಳ ವಿತರಣೆಯಲ್ಲಿ ವಿಳಂಬವಾಯಿತು. ೨೦೧೭–೧೮ನೇ ಸಾಲಿನಲ್ಲಿ ಒಟ್ಟು ೪ ಸಾವಿರ ವಾಹನ ವಿತರಿಸುವ ಗುರಿ ಹೊಂದಲಾಗಿದ್ದು, ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ ಎಂದರು.

⏭ ೮

ವಿಧಾನಸೌಧದ ಮುಂಭಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶೇಷಚೇತನ ಮಹಿಳೆಗೆ ಸ್ಕೂಟರ್ ಕೀ ಹಸ್ತಾಂತರಿಸಿದರು. ಸಚಿವೆ ಉಮಾಶ್ರೀ ಚಿತ್ರದಲ್ಲಿದ್ದಾರೆ.

- ಡಿ.೩೧ರೊಳಗೆ ೪ ಸಾವಿರ ವಾಹನ ವಿತರಣೆ
- ೨೦೧೪ರಲ್ಲಿ ೬೪೭ ಕೋಟಿ ರೂ. ಅನುದಾನ
- ೨೦೧೭ರಲ್ಲಿ ೧೦೭೪ ಕೋಟಿ ರೂ.ಗೆ ಏರಿಕೆ

೨೦ರಿಂದ ನಿತ್ಯ ಚೆನ್ನೈಗೆ ವಿಮಾನ

ಮೈಸೂರಿನಿಂದ ಸಂಜೆ ೭.೦೫ಕ್ಕೆ ವಿಮಾನ ಹಾರಾಟ: ಸಂಸದ ಪ್ರತಾಪ ಸಿಂಹ

ಮೈಸೂರು,ಸೆ.೧೧– ಮಂಡಕಳ್ಳಿ ಸಮೀಪವಿರುವ ಮೈಸೂರು ವಿಮಾನ ನಿಲ್ದಾಣದಿಂದ ಮತ್ತೆ ವಿಮಾನ ಹಾರಾಟಕ್ಕೆ ಅಂತಿಮ ಸಿದ್ಧತೆ ನಡೆದಿದ್ದು, ಇದೇ ೨೦ರಂದು ವಿಮಾನಯಾನ ರಾಜ್ಯ ಸಚಿವ ಜಯಂತ್ ಸಿನ್ಹಾ ಚಾಲನೆ ನೀಡಲಿದ್ದಾರೆ ಎಂದು ವಿಮಾನ ನಿಲ್ದಾಣ ಸಲಹಾ ಮಂಡಳಿ ಅಧ್ಯಕ್ಷ, ಸಂಸದ ಪ್ರತಾಪ ಸಿಂಹ ತಿಳಿಸಿದರು.

ವಿಮಾನ ನಿಲ್ದಾಣದಲ್ಲಿ ಸೋಮವಾರ ನಡೆದ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು, ಹಿಂದೆ ಈ ನಿಲ್ದಾಣದಿಂದ ೨ ಬಾರಿ ವಿಮಾನ ಹಾರಾಟವಾಗಿತ್ತು. ನಂತರ ಕಾರಣಾಂತರಗಳಿಂದ ಸ್ಥಗಿತಗೊಂಡಿತ್ತು. ಈ ಬಾರಿ ಹಾಗಾಗದಂತೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ಮೈಸೂರಿನಿಂದ ಚೆನ್ನೈಗೆ ವಿಮಾನ ನಿತ್ಯವೂ ಪ್ರಯಾಣಿಸಲಿದೆ. ಸೆ.೨೦ರ ಸಂಜೆ ೬.೪೦ಕ್ಕೆ ಚೆನ್ನೈನಿಂದ ವಿಮಾನ ಈ ನಿಲ್ದಾಣಕ್ಕೆ ಆಗಮಿಸಲಿದೆ. ಇದು ಕೇಂದ್ರ ಸರ್ಕಾರದ ಉಡಾನ್ ಯೋಜನೆ ಅಡಿಯಲ್ಲಿ ಜಾರಿಯಾಗಲಿದೆ. ಮೊದಲ ದಿನ ಪ್ರಯಾಣಿಕರ ಉತ್ತೇಜನಕ್ಕಾಗಿ ರಿಯಾಯಿತಿಯ ೯೯೯ ರೂ. ದರ ನಿಗದಿಪಡಿಸಲಾಗಿದೆ. ಟ್ರೂಜೆಟ್ ಸಂಸ್ಥೆಯು ವಿಮಾನ ಹಾರಾಟಕ್ಕೆ ಸಮ್ಮತಿಸಿದೆ. ವಿಮಾನದಲ್ಲಿ ೭೨ ಮಂದಿ ಪ್ರಯಾಣಕ್ಕೆ ಅವಕಾಶ ಇದೆ ಎಂದರು.

ವಾಸ್ತವವಾಗಿ ಸೆ.೧೫ರಿಂದಲೇ ವಿಮಾನ ಹಾರಾಟಕ್ಕೆ ಸಿದ್ಧತೆ ನಡೆದಿತ್ತು. ಆದರೆ, ಸಚಿವರಿಗೆ ಆ ದಿನ ಬೇರೆ ಕಾರ್ಯ ಇರುವುದರಿಂದ ಸೆ.೨೦ಕ್ಕೆ ಮುಂದೂಡಲಾಗಿದೆ. ವಿಮಾನ ಹಾರಾಟಕ್ಕೆ ಚಾಲನೆ ನೀಡಲು ಸಚಿವರೇ ಬಂದರೆ, ವಿಮಾನ ಹಾರಾಟಕ್ಕೆ ಸಂಬಂಧಿಸಿದ ಇತರೆ ಸಮಸ್ಯೆಗಳ ಬಗ್ಗೆಯೂ ಚರ್ಚೆ ನಡೆಸಲು ಅನುಕೂಲವಾಗುತ್ತದೆ ಎಂಬ ಕಾರಣಕ್ಕಾಗಿ ಅವರಿಗಾಗಿ ಕಾದು ದಿನ ನಿಗದಿ ಪಡಿಸಲಾಗಿದೆ ಎಂದು ಪ್ರತಾಪ ಸಿಂಹ ವಿವರಿಸಿದರು.

⏭ ೮

ಮೈಸೂರು ವಿಮಾನ ನಿಲ್ದಾಣದಲ್ಲಿ ನಡೆದ ವಿಮಾನ ನಿಲ್ದಾಣ ಪ್ರಾಧಿಕಾರ ಸಲಹಾ ಸಮಿತಿ ಸಭೆಯಲ್ಲಿ ಸಂಸದ ಪ್ರತಾಪ ಸಿಂಹ ಮಾತನಾಡಿದರು. ಜಿ.ಟಿ.ದೇವೇಗೌಡ, ಡಿ.ರಂದೀಪ್, ಮನೋಜ್‌ಕುಮಾರ್, ಎಂ.ರಾಜೇಂದ್ರ, ಸುರೇಶ್‌ಕುಮಾರ್ ಜೈನ್, ಯಶಸ್ವಿ ಸೋಮಶೇಖರ್ ಚಿತ್ರದಲ್ಲಿದ್ದಾರೆ.

ವಿಮಾನ ಆಗಮನ–ನಿರ್ಗಮನ

ಚೆನ್ನೈನಿಂದ ನಿತ್ಯ ಸಂಜೆ ೫.೨೫ಕ್ಕೆ ಹೊರಟು, ಮೈಸೂರು ನಿಲ್ದಾಣಕ್ಕೆ ಸಂಜೆ ೬.೪೦ಕ್ಕೆ ತಲುಪುವ ವಿಮಾನ ಮತ್ತೆ, ಮೈಸೂರಿನಿಂದ ಸಂಜೆ ೭.೦೫ಕ್ಕೆ ಹೊರಟು ರಾತ್ರಿ ೮.೨೦ಕ್ಕೆ ಚೆನ್ನೈ ತಲುಪುತ್ತದೆ. ಎರಡೂ ನಗರಗಳ ನಡುವಿನ ಪಯಣದ ಅವಧಿ ೧.೧೫ ಗಂಟೆ.